ಮನೆಯಂಗಳದ ಮಾವಿನ ಮರದಡಿ ನೆಲದಲ್ಲಿ ಕವಿಚಿದ್ದ ಬುಟ್ಟಿಯನ್ನು ಮೇಲೆತ್ತುವ ಮೊದಲು ಗೇಟಿನತ್ತ ನೋಡಿದಳು ಫಾತುಮ್ಮ. ಗೇಟು ಹಚ್ಚಿ ಅಗಳಿ ಹಾಕಿತ್ತು. ಕಬ್ಬಿಣದ ಗೇಟಿನ ಒಳಭಾಗಕ್ಕೆ ಹದಿದ ವೈರಿನ ಮೆಶ್ ಅಲ್ಲಲ್ಲಿ ಕಿತ್ತು ಬಂದು ಬಣ್ಣಗೆಟ್ಟಿದ್ದರೂ ಯಾವ ಕೋಳಿಪಿಳ್ಳೆಯೂ ತಪ್ಪಿಸಿಕೊಳ್ಳುವಂತಹ ಕಂಡಿಗಳಿಲ್ಲದಿರುವುದು ಕಂಡು ಮನಸ್ಸಿಗೆ ಸಮಾಧಾನವಾಯಿತು. ಈಗಾಗಲೇ ಕೋಳಿಗಳು ದೊಡ್ಡದಾಗಿವೆಯೆಂದುಕೊಂಡು ನಿಡಿದಾಗಿ ಉಸಿರು ಹೊಯ್ಯುತ್ತಾ ದೊಡ್ಡ ಕುಕ್ಕೆಯನ್ನು ಮೇಲೆತ್ತಲಾಗಿ ತಾಯಿ ಕೋಳಿಯ ಹಿಂದೆ ಹಿಂಡುಗಟ್ಟಿ ಅತ್ತಿತ್ತ ಅಂಗಳದ ತುಂಬೆಲ್ಲ ಓಡತೊಡಗಿದ ಮರಿಗಳು... ಗೇಟಿನತ್ತ ಒಂದೆರೆಡು ಓಡಿದರೆ ಹುಂಜವನ್ನು ಮುಚ್ಚಿಟ್ಟ ಕುಕ್ಕೆಯ ಬಳಿ ಕೆಲವು... ಕುಕ್ಕೆಯನ್ನು ಕಾಲಿನಿಂದ ಕೆರೆಯುತ್ತಾ ಕುಕ್ಕೆಯ ಮೇಲೆಗರಿ ಕೂತವು ಒಂದೆರಡು... ತಾಯಿ ಕೋಳಿ ಕೊಕ್ಕೋಕ್ಕೋ ಎನ್ನುತ್ತ ಫಾತುಮ್ಮಳ ಕಾಲಬಳಿ ಬಂದು ಸುತ್ತತೊಡಗಿತು. ಫಾತುಮ್ಮ ತನ್ನ ಎಲ್ಲ ಬವಣೆಗಳನ್ನು ಮರೆತಂತೆ ಅವುಗಳತ್ತ ನೋಡಿ ನಗುತ್ತಾ, 'ಟೆಹರೋ... ಲೇಕೆ ಆತಿ ಹೂಂ' ಎನ್ನುತ್ತಾ ವರಾಂಡದ ಮುಂಭಾಗದ ಕಲ್ಲುಬೆಂಚಿನ ಮೇಲಿಟ್ಟ ಹಿಟ್ಟಿನ ಅಲ್ಯೂಮಿನಿಯಂ ಡಬರಿಯನ್ನು ಕೈಗೆತ್ತಿ ಮಾವಿನ ಮರದಡಿ ತಂದಳು. ಅಂಗಳದಂಚಿನ ಹಾಸುಗಳಲ್ಲಿನ ಮೇಲೆ ತಣಿದಿದ್ದ ರಾಗಿ ಮುದ್ದೆಯನ್ನು ಚಿಕ್ಕ ಚಿಕ್ಕ ಚೂರು ಮಾಡಿ ಎಸೆದಂತೆಲ್ಲ ಕವಕವನೆ ತಿನ್ನತೊಡಗಿದ ಕೋಳಿಗಳನ್ನೇ ಅಕ್ಕರೆಯಿಂದ ನೋಡುತ್ತಾ ಮೈಮರೆತಳು. ಹಿಟ್ಟಿನ ವಾಸನೆಗೋ ಕೋಳಿಗಳ ಓಡಾಟದ ಸದ್ದಿಗೋ ಗೂಡಿನಲ್ಲಿಟ್ಟ ಹುಂಜ ಜೋರು ದನಿಯೆತ್ತಿ ಕಿರುಚತೊಡಗಿತು. ಹುಂಜವನ್ನು ಮೊದಲಿಗೆ ಬಿಟ್ಟರೆ ಕೋಳಿಗಳಿಗೆ ಉಳಿಸುವುದಿಲ್ಲವೆಂದು ತುಸು ತಡವಾಗಿ ಕೋಳಿಗುಂಪಿನ ಅರ್ಧ ಊಟವಾದ ಮೇಲೆ ಅದನ್ನು ಬಿಡುಗಡೆಗೊಳಿಸುವ ವಾಡಿಕೆ. ಮೆಲ್ಲನೆ ಎತ್ತರದ ಗೂಡನ್ನೆತ್ತಿ ತಾನು ಪ್ರೀತಿಯಿಂದ ಸದ್ದಾಂ ಎಂದು ಕರೆಯುತ್ತಿದ್ದ ಹುಂಜವನ್ನು ಬಿಡುಗಡೆಗೊಳಿಸಿ ಹಿಟ್ಟು ಹಾಕುವ ಕಾಯಕ ಮುಂದುವರಿಸಿದಳು ಫಾತುಮ್ಮ. ಹುಂಜ ನೇರವಾಗಿ ಕೋಳಿಗಳ ಬಳಿ ಬಂದು ಹಾರುತ್ತ ತನ್ನ ಪ್ರೇಯಸಿಯರ ಬೆನ್ನ ಮೇಲೇರಿ ಕುಳಿತುಕೊಂಡಿತು. ಫಾತುಮ್ಮ 'ಥತ್ ಥೇರೀ' ಎಂದು ಬೈಯುತ್ತಾ ತನ್ನ ದುಪ್ಪಟ್ಟವನ್ನೆತ್ತಿ ಅದನ್ನು ಜಾಡಿಸಿದಳು. ತಾತ್ಕಾಲಿಕವಾಗಿ ತನ್ನ ಪ್ರೇಮವನ್ನು ಮರೆತು ಹುಂಜವು ಹಿಟ್ಟಿನತ್ತ ಲಕ್ಷ್ಯವಹಿಸಿ ಲಗುಬಗೆಯಿಂದ ಉರುಟಾದ ಹಿಟ್ಟಿನ ಉಂಡೆಗಳನ್ನು ಭಕ್ಷಿಸತೊಡಗಿತು.

ಈ ಎಲ್ಲ ವಿದ್ಯಮಾನಗಳು ನಡೆಯುತ್ತಿರುವಾಗಲೇ ಫಾತುಮ್ಮಳ ಕಿವಿಗೆ ಕೆಂಪುಬಸ್ಸಿನ ಹಾರ್ನಿನ ಶಬ್ದ ಕೇಳಿತು. ಸೂರ್ಯ ಆಗಲೇ ಪಡುವಣಕ್ಕೆ ಇಳಿಯುತ್ತಿದ್ದ. ಬೆಳಗ್ಗೆ ಮೊದಲ ಬಸ್ಸಿಗೇ ಮೈಸೂರಿಗೆ ಹೋಗಿದ್ದ ಮಗಳು ಖತೀಜಾಳ ನೆನಪಾಗಿ ಕಳವಳವಾಯಿತವಳಿಗೆ. ಈಗ ಬಂದಿದ್ದು ಸಕಲೇಶಪುರದ ಗಾಡಿಯೆಂದು ಅವಳಿಗೆ ಬೋಧೆಯಾಗುತ್ತಲೇ, 'ಈಗ ಬಂದಿದ್ದರೆ ಸರಿ... ಇಲ್ಲವಾದರೆ ಮುಂದಿನ ಬಸ್ಸು ಬರಲು ಇನ್ನು ಎರೆಡುಗಂಟೆ ಕಾಯಬೇಕು. ಸುಬ್ರಮಣ್ಯದ ಗಾಡಿಗೆ ಬಂದರೆ ಅವಳು ಏಳುವರೆಯಿಂದ ಏಳೂಮುಕ್ಕಾಲಾಗುತ್ತೆ. ಪಾಪದ ಹುಡುಗಿ... ಒಬ್ಬಳೇ ಏನು ಮಾಡಿಕೊಂಡಳೋ... ಹೋದ ಕೆಲಸ ಏನಾಯ್ತೋ' ಎಂದು ಚಿಂತಿಸಿ ಸೋತಳು. ಮೈಸೂರಿನ ಉದಯಗಿರಿಯಲ್ಲಿರುವ ತಮ್ಮನೇನೋ ಸಹಾಯಕ್ಕೆ ಬರುತ್ತೀನಿ ಅಂದಿದ್ದಾನೆ. ಹಾಗಾಗಿ, ಯೋಚನೆಯಿಲ್ಲ ಅನ್ನಿಸಿದರೂ ಖತೀಜಾಳ ಕುರಿತು ಅವಳ ಭವಿಷ್ಯದ ಕುರಿತು ತಲ್ಲಣ ಒಂದು ಎದೆಯೊಳಗೆ ಹಾದು ಹೋಯಿತು.

ಖತೀಜಾ ಸಕಲೇಶಪುರದ ಗಾಡಿಗೆ ಬರಲಿಲ್ಲ. ಫೋನಾದರು ಮಾಡೋಣವೆಂದರೆ ಮನೆಯಲ್ಲಿದ್ದುದು ಒಂದೇ ಫೋನು... ಖತೀಜಾಳ ಗಂಡ ತೆಗೆದುಕೊಟ್ಟಿದ್ದು

